**<u>ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ</u>**

**<u>ಸಿ.ಸಿ ಸಂಖ್ಯೆ : 447/2022</u>**

**ಸಾಕ್ಷಿದಾರರ ಹೆಸರು** : ಎಸ್ ಬಿ ನಿತ್ಯಾನಂದ **P.W -03**

**ತಂದೆಯ ಹೆಸರು** : ಎಸ್ ಎಂ ಭಾಸ್ಕರ್ **C.W -09**

**ವಯಸ್ಸು** : 40 ವರ್ಷ

**ಉದ್ಯೋಗ** : ಹಾಲಿನ ವ್ಯಾಪಾರಿ

**ವಾಸಸ್ಥಳ** : ಹನುಮಂತ ನಗರ ಶೃಂಗೇರಿ.

**ದಿನಾಂಕಃ11-09-2024 ರಂದು ಪ್ರಮಾಣವಚನ ಬೋಧಿಸಲಾಯಿತು.**

**<u>:: ಮುಖ್ಯ ವಿಚಾರಣೆ : ಮಾನ್ಯ ಎ.ಪಿ.ಪಿ. ಯವರಿಂದ ::</u>**

1. ಸಾಕ್ಷಿಗೆ ನಿಪಿ-3 ಮಹಜರ್ ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಒಪ್ಪಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸದರಿ ಮಹಜರ್ ಗೆ ಸಹಿಯನ್ನು ನಾನು ದಿಃ03-03-2020 ರಂದು ಶೃಂಗೇರಿಯ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಶೃಂಗೇರಿಯ ಆರ್ ಎಫ್ ಒ/ಚಾಸಾ-1 ರವರು 1 ನೇ ಆರೋಪಿಯಿಂದ ಕೆಲವು ವಸ್ತುಗಳನ್ನು ಜಪ್ತು ಪಡಿಸಿಕೊಂಡು ಶೃಂಗೇರಿ ಪೋಲೀಸರಿಗೆ ಹಸ್ತಾಂತರ ಮಾಡಿದ ಸಂದರ್ಭದಲ್ಲಿ ಸದರಿ ಮಹಜರ್ ಅನ್ನು ಮಾಡಿ, ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸದರಿ ಮಹಜರ್ ನಡಿಯಲ್ಲಿ ಚಾಸಾ-1 ರವರು ಶೃಂಗೇರಿ ಪೋಲೀಸರಿಗೆ 10 ವಸ್ತುಗಳನ್ನು ಹಸ್ತಾಂತರ ಮಾಡಿರುತ್ತಾರೆ. ಸದರಿ ವಸ್ತುಗಳಲ್ಲಿ ಒಂದು ಕಪ್ಪು ಬಣ್ಣದ 3.5 ಅಡಿಯ ಏರ್ ಪಿಸ್ತೂಲ್, 50 ಗ್ರಾಂ ನ ಗನ್ ಪೌಡರ್, 50 ಎಂ.ಎಲ್ ನ ಒಂದು ಆಯಿಲ್ ಡಬ್ಬಿಗಳು ಇದ್ದವು ಉಳಿದ ವಸ್ತುಗಳು ಈಗ ನನಗೆ ನೆನಪಿಲ್ಲ. ಸದರಿ ಮಹಜರ್ ತಯಾರಿಸುವ ಸಮಯದಲ್ಲಿ ನನ್ನ ಜೊತೆ ಚಾಸಾ-10, ಚಾಸಾ-1 ಮತ್ತು ಶೃಂಗೇರಿ ಪೋಲೀಸರವರಾದ ಚಾಸಾ-22 ಹಾಗೂ ಚಾಸಾ-28 ರವರು ಸಹ ಇದ್ದರು. ಸದರಿ ಮಹಜರ್ ಅನ್ನು ಆ ದಿನ ಮಧ್ಯಾಹ್ನ 1 ರಿಂದ 2 ಗಂಟೆಯ ಮಧ್ಯದಲ್ಲಿ ಮಾಡಲಾಗಿರುತ್ತದೆ. ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿದೆ. ಸದರಿ ಮಹಜರ್ ಸಮಯದಲ್ಲಿ 3-4 ಪೋಟೋಗಳನ್ನು ಪೋಲೀಸರು ತೆಗೆದಿರುತ್ತಾರೆ. ಸಾಕ್ಷಿಯು ನಿಪಿ-4 ರಿಂದ ನಿಪಿ-7 ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

ನಿಪಿ-3 ಮಹಜರ್ ನ ಅಡಿಯಲ್ಲಿ ಅಮಾನತು ಪಡಿಸಿಕೊಂಡ ವಸ್ತುಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ 1 ರಿಂದ 10 ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ.

2. ಸಾಕ್ಷಿಗೆ ಪ್ರಕರಣಕ್ಕೆ ಸಂಬಂಧ ಪಟ್ಟ ಸ್ಥಳ ಮಹಜರ್ ಆದ ನಿಪಿ-8 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ಸದರಿ ಮಹಜರ್ ಗೆ ನಾನು ಸಹಿಯನ್ನು ಮೇಲೆ ಹೇಳಿದಂತೆ ಚಾಸಾ-1 ರವರು 1ನೇ ಆರೋಪಿಯ ಮನೆಯಿಂದ ವಶ ಪಡಿಸಿಕೊಂಡ ಮೇಲೆ ಹೇಳಿದ ವಸ್ತುಗಳಿಗೆ ಸಂಬಂಧ ಪಟ್ಟಂತೆ 1ನೇ ಆರೋಪಿಯ ಮನೆಯಲ್ಲಿ ಮಾಡಿದ ಸ್ಥಳ ಮಹಜರ್ ಆಗಿರುತ್ತದೆ. ಸದರಿ ಮಹಜರ್ ತಯಾರಿಸುವ ಸಮಯದಲ್ಲಿ ನನ್ನ ಜೊತೆ ಚಾಸಾ-10, ಚಾಸಾ-1 ಮತ್ತು ಶೃಂಗೇರಿ ಪೋಲೀಸರಾದ ಚಾಸಾ-22 ಮತ್ತು ಚಾಸಾ-28 ರವರು ಇದ್ದರು. ನಿಪಿ-8 ಮಹಜರ್ ಅನ್ನು ಪೋಲೀಸರು ಆ ದಿನ ಮಧ್ಯಾಹನ 2.10 ರಿಂದ 2.50 ರ ಮಧ್ಯದಲ್ಲಿ ತಯಾರಿಸಿರುತ್ತಾರೆ. ನಿಪಿ-8 ಮಹಜರ್ ನಲ್ಲಿ ಬರೆದಿರುವ ವಿಷಯಗಳನ್ನೆಲ್ಲಾ ನಾನು ಓದಿ ತಿಳಿದುಕೊಂಡಿರುತ್ತೇನೆ. ಪೊಲೀಸರು ನಿಪಿ -8 ಮಹಜರ್ ತಯಾರಿಸುವ ಸಮಯದಲ್ಲಿ ಒಟ್ಟು 2 ಪೋಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು ನಿಪಿ -9 ಮತ್ತು ನಿಪಿ -10 ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**:ಪಾಟೀಸವಾಲು : ಮಾನ್ಯ ಎ.ಪಿ.ಪಿ. ಯವರಿಂದಃ**

1. ನಿಪಿ -3 ಮಹಜರ್ ನ ಅಡಿಯಲ್ಲಿ ಚಾಸಾ-1 ರವರು 1ನೇ ಆರೋಪಿಯ ಮನೆಯಿಂದ ಅಮಾನತು ಪಡಿಸಿಕೊಳ್ಳಲಾದ 1. ಒಂದು ಕಪ್ಪು ಬಣ್ಣದ 3.5 ಅಡಿ ಉದ್ದದ ಏರ್ ಗನ್, 2. ಒಂದು ಕಪ್ಪು ಬಣ್ಣದ ಏರ್ ಪಿಸ್ತೂಲ್ ತೆಗೆದು, 3. 02 ಸಖ್ಯೆಯ ಪಿಸ್ತೂಲ್ ಪೆಲೆಟ್ಸ್ 4.30 ಸಂಖ್ಯೆಯ ಪೈಬರ್ ಐಟಮ್ಸ್, 5. 05 ಸಂಖ್ಯೆಯ ಏರ್ ರೈಫಲ್ಸ್ 0.22 ಕ್ಯಾಲ್, 6. 02 ಸಂಖ್ಯೆಯ ಎಲೆಕ್ಟ್ರಿಕಲ್ ಡಿಟೋನೇಟರ್ ವಿತ್ ಪ್ರೇಮ್ ಜೀವಂತ ಸಂಖ್ಯೆ-07, 7. ಬ್ಲಾಸ್ಟಿಂಗ್ ಕನೆಕ್ಟಿಂಗ್ ವೈರ್, 8. ಸುಮಾರು 50 ಗ್ರಾಂ ನಷ್ಟು ಗನ್ ಪೌಡರ್, 9. ಗನ್ ಕ್ಲೀನಿಂಗ್ ಆಯಿಲ್ ಒಂದು ಚಿಕ್ಕ ಬಾಟಲ್, 10. 03 ಜಿಲೆಟಿನ್ ಟ್ಯೂಬ್ ಗಳು 25 ಎಮ್ ಎಮ್ 1.25 ಗ್ರಾಂ ನಷ್ಟು ಎಕ್ಸ್ ಪೋಸಿವ್ ಗಳನ್ನು ಶೃಂಗೇರಿ ಪೋಲಿಸರಿಗೆ ಹಸ್ತಾಂತರ

ಮಾಡಿರುತ್ತಾರೆ ಎಂದರೆ ಸರಿ. ಸದರಿ ವಸ್ತುಗಳು ನ್ಯಾಯಾಲಯದ ಮುಂದಿರುವ ಮು. ಮಾ 1 ರಿಂದ 10 ಆಗಿರುತ್ತದೆ ಎಂದರೆ ಸರಿ.

**ಃಪಾಟೀ ಸವಾಲುಃ 1 ರಿಂದ 4 ನೇ ಆರೋಪಿ ಪರ ಶ್ರೀ. ಹೆಚ್ ಆರ್ ಯು ವಕೀಲರಿಂದ ಃ**

1. ನಾನು 7 ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಶೃಂಗೇರಿಯ ಬಜರಂಗದಳ ಮತ್ತು ವಿ.ಹೆಚ್.ಪಿ ಕಾರ್ಯಕರ್ತನಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಬಿ.ಜಿ.ಪಿ ರಾಜಕೀಯ ಪಕ್ಷದ ಕಾರ್ಯಕರ್ತ ನಾಗಿರುತ್ತೇನೆ ಎಂದರೆ ಸರಿ. ನಾನು ಆರ್.ಎಸ್.ಎಸ್ ನ ಕಾರ್ಯಕರ್ತನಾಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮನೆಯಿಂದ 1 ನೇ ಆರೋಪಿಯ ಮನೆ ಸುಮಾರು ಮುಕ್ಕಾಲು ಕಿ.ಮೀ ದೂರದಲ್ಲಿದೆ. 1 ನೇ ಆರೋಪಿಯ ಮನೆಯ ಸುತ್ತ ಮುತ್ತ ಬೇಕಾದಷ್ಟು ಮನೆಗಳು ಇರುತ್ತದೆ ಎಂದರೆ ಸರಿ. ನಾನು ಬಿ.ಜಿ.ಪಿ ರಾಜಕೀಯ ಪಕ್ಷದ ಕಾರ್ಯಕರ್ತನಾಗಿರುವುದರಿಂದ ಶೃಂಗೇರಿಯ ಬಿ.ಜಿ.ಪಿ ಪಕ್ಷದ ಮುಖಂಡರಾದ ಹರೀಶ್ ಶೆಟ್ಟಿ ಎಂಬುವವರ ಹಿಂಬಾಲಕನಾಗಿರುತ್ತೇನೆ ಎಂದರೆ ಸರಿ.

2. ದಿಃ 03-03-2020 ರಂದು ನಾನು ಮಧ್ಯಾಹ್ನ ಸುಮಾರು 12.30 ಸಮಯದಲ್ಲಿ ಶೃಂಗೇರಿಯ ಅರಣ್ಯ ಇಲಾಖೆಯ ಕಛೇರಿಯ ಬಳಿ ಹೋಗಿರುತ್ತೇನೆ. ಸದರಿ ಸಮಯದಲ್ಲಿ ಅರಣ್ಯಾಧಿಕಾರಿಗಳು ಈ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ಯಾವುದಾದರೂ ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುತ್ತಾರೋ ಅಥವಾ ಇಲ್ಲವೋ ನಾನು ನೋಡಿರುವುದಿಲ್ಲ. ನಂತರ ನಾನು ಶೃಂಗೇರಿ ಪೋಲೀಸ್ ಠಾಣೆಗೆ ಹೋದಾಗ ಮೊದಲ ಬಾರಿಗೆ ಈ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ಕೆಲವು ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುವ ವಿಚಾರ ನನಗೆ ತಿಳಿದು ಬಂದಿರುತ್ತದೆ. ನಾನು ಶೃಂಗೇರಿ ಪೋಲೀಸ್ ಠಾಣೆಗೆ ಹೋದಾಗ ಮಧ್ಯಾಹ್ನ ಸುಮಾರು 1 ಗಂಟೆ ಆಗಿತ್ತು. ನಾನು ಶೃಂಗೇರಿ ಪೋಲೀಸ್ ಠಾಣೆಗೆ ಹೋಗಿ ನೋಡಿದಾಗ ಈ ನಾನು ಗುರುತಿಸಿರುವ ಮು.ಮಾ-1 ರಿಂದ 10 ವಸ್ತುಗಳು ಅದಾಗಲೇ ಪೋಲೀಸ್ ಠಾಣೆಯಲ್ಲಿ ಇದ್ದವು. ಸದರಿ ಸಮಯದಲ್ಲಿ ಚಾಸಾ-6 /ಹರೀಶ್ ಶೆಟ್ಟಿಯವರು ಪೋಲೀಸ್ ಠಾಣೆಯಲ್ಲಿ ಇರಲಿಲ್ಲ. ಶೃಂಗೇರಿ ಪೋಲೀಸ್ ಠಾಣೆಗೆ ನನಗೆ ಬರಲು ಶೃಂಗೇರಿಯ ಪೋಲೀಸರು ತಿಳಿಸಿರುತ್ತಾರೆ. ಈಗ ನಾನು ಗುರುತಿಸಿರುವ ಮು.ಮಾ-1 ರಿಂದ 10 ವಸ್ತುಗಳನ್ನು ಚಾಸಾ-1 ರವರು ಶೃಂಗೇರಿ ಪೋಲೀಸರಿಗೆ ಮಧ್ಯಾಹ್ನ 1.00 ಗಂಟೆಗೆ ಹಸ್ತಾಂತರ ಮಾಡಿರುತ್ತಾರೆ. ನಿಪಿ-3 ಮಹಜರ್ ಅನ್ನು ಸುರೇಶ್/ಚಾಸಾ-22 ಎನ್ನುವ ಒಬ್ಬ ಪೋಲೀಸರು ಬರೆದಿರುತ್ತಾರೆ. ನಾನು ಪೋಲೀಸ್ ಠಾಣೆಯಲ್ಲಿ 3-4 ಸಹಿಗಳನ್ನು ಮಾಡಿರುತ್ತೇನೆ. ಸದರಿ 3-4 ಸಹಿಗಳು ಹಾಕಿರುವ ದಾಖಲೆಗಳು ಯಾವ ದಾಖಲೆಗಳು ಎಂದು ಈಗ ನನಗೆ ನೆನಪಿಲ್ಲ. ನಾನು ಪೋಲೀಸ್ ಠಾಣೆಯಲ್ಲಿ ಆ ದಿನ ಮಧ್ಯಾಹ್ನ 2.00 ಗಂಟೆ ವರೆಗೂ ಇದ್ದು, ನಿಪಿ -3 ಮಹಜರ್ ಗೆ ಸಹಿ ಮಾಡಿರುತ್ತೇನೆ.

3. ನಂತರ 1 ನೇ ಆರೋಪಿಯ ಮನೆಯ ಬಳಿ ನನ್ನನ್ನು ಪೋಲೀಸರೇ ಕರೆದಿರುತ್ತಾರೆ. ನಾನು 1 ನೇ ಆರೋಪಿಯ ಮನೆಯ ಬಳಿ ಹೋದಾಗ ಪೋಲೀಸರಾದ ಚಾಸಾ-22, ಚಾಸಾ-10 ಮತ್ತು ಚಾಸಾ-1 ರವರು ಇದ್ದರು. 1 ನೇ ಆರೋಪಿಯ ಮನೆಯಲ್ಲಿ ನನಗೆ ಪೋಲೀಸರು ಯಾವುದೇ ವಸ್ತುವನ್ನು ತೋರಿಸಿರುವುದಿಲ್ಲ. 1 ನೇ ಆರೋಪಿಯ ಮನೆಯ ಹೊರಗಡೆ ಒಂದು ಪೋಟೋ ಹಾಗೂ ಮನೆಯ ಒಳಗೆ ಒಂದು ಪೋಟೋವನ್ನು ಪೋಲೀಸರು ತೆಗೆದಿರುತ್ತಾರೆ. ಸದರಿ ಸಮಯದಲ್ಲಿ 1 ನೇ ಆರೋಪಿಯ ಅಜ್ಜಿ ಹಾಗೂ ಹೆಂಡತಿ ಮನೆಯಲ್ಲಿ ಇದ್ದರು. ಪೋಲೀಸರು 1 ನೇ ಆರೋಪಿಯ ಅಜ್ಜಿ ಹಾಗೂ ಹೆಂಡತಿಯನ್ನು ನಿಲ್ಲಿಸಿ ಯಾವುದೇ ಪೋಟೋವನ್ನು ನನ್ನ ಸಮಕ್ಷಮ ತೆಗೆದಿರುವುದಿಲ್ಲ. ದಿಃ03-03-2020 ರಂದು ನನ್ನನ್ನು ಪೋಲೀಸರು ನಾನು ಹೇಳುವಂತೆ ಶೃಂಗೇರಿ ಪೋಲೀಸ್ ಠಾಣೆಗೆ ಕರೆದಿರುವುದಿಲ್ಲ ಮತ್ತು ನನ್ನ ಸಮಕ್ಷಮ ಚಾಸಾ-1 ರವರು ಯಾವುದೇ ವಸ್ತುಗಳನ್ನು ಪೋಲೀಸ್ ರವರಿಗೆ ನೀಡಿರುವುದಿಲ್ಲ ಮತ್ತು ಪೋಲೀಸರು ನನ್ನ ಸಮಕ್ಷಮ ಮು. ಮಾ -1 ರಿಂದ 10 ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

4. ಈ ಹಿಂದೆ 1 ನೇ ಆರೋಪಿ ಬಿ.ಜೆ.ಪಿ ಪಕ್ಷದ ಕಾರ್ಯಕರ್ತ ನಾಗಿದ್ದ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ನಾಯಕರಾದ ಹರೀಶ್ ಶೆಟ್ಟಿ /ಚಾಸಾ-7 ರವರಿಗೆ ಮತ್ತು 1 ನೇ ಆರೋಪಿಗೆ ವೈ ಮನಸ್ಸು ಉಂಟಾದ ಕಾರಣ 1 ನೇ ಆರೋಪಿ ಬಿ.ಜೆ.ಪಿ ಪಕ್ಷವನ್ನು ಬಿಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಉದ್ದೇಶದಿಂದ ಚಾಸಾ-7 ರವರಿಗೆ 1 ನೇ ಆರೋಪಿಯ ವಿರುದ್ಧ ದ್ವೇಷ ಇರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆದ ಕಾರಣ ಚಾಸಾ-7 ರವರು ನನ್ನನ್ನು, ಇತರರನ್ನು ಬಳಸಿಕೊಂಡು ಪೋಲೀಸರು ಹಾಗೂ ಅರಣ್ಯ ಇಲಾಖೆಯವರೊಂದಿಗೆ ಶಾಮೀಲಾಗಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

5. ನಿಪಿ-9 ಮತ್ತು ನಿಪಿ-10 ಪೋಟೋಗಳು ನಾನು ಹೇಳುವಂತೆ 1 ನೇ ಆರೋಪಿಯ ಮನೆಯ ಪೋಟೋಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-8 ಮಹಜರ್ ಗೆ 1 ನೇ ಆರೋಪಿಯ ಮನೆಯ ಅಕ್ಕ-ಪಕ್ಕದ ಮನೆಯವರು ಯಾರೂ ಸಹಿ ಮಾಡಿರುವುದಿಲ್ಲ. ನಿಪಿ-3 ಮಹಜರ್ ಅನ್ನು ಸುರೇಶ್ /ಚಾಸಾ-22 ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ. ನಿಪಿ-3 ಮಹಜರ್ ತಯಾರಿಸುವ ಸಮಯದಲ್ಲಿ ನಾನು ಸ್ಥಳದಲ್ಲಿ ಇದ್ದು, ನನ್ನ ಸಮಕ್ಷಮ ಪೋಲೀಸರು ಮು.ಮಾ.1 ರಿಂದ 10 ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುತ್ತಾರೆ ಎಂದು ನಾನು ಹೇಳಿರುವ ವಿಚಾರಗಳು ಎಲ್ಲಾ ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ ಚಾಸಾ-1 ರವರು ಸದರಿ

ವಸ್ತುಗಳನ್ನೆಲ್ಲಾ ಶೃಂಗೇರಿ ಪೋಲೀಸರಿಗೆ ಹಸ್ತಾಂತರ ಮಾಡಿರುತ್ತಾರೆ ಎಂದು ನಾನು ಹೇಳಿರುವ ವಿಚಾರಗಳು ಎಲ್ಲಾ ಸುಳ್ಳು ಎಂದರೆ ಸರಿಯಲ್ಲ. ನಿಪಿ-3 ಮತ್ತು ನಿಪಿ-8 ಮಹಜರ್ ಗಳು ಸುಳ್ಳಾಗಿ ಸೃಷ್ಟಿಸಿರುವ ಮಹಜರ್ ಗಳು ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸೃಷ್ಟಿಸಿರುವ ಮಹಜರ್ ಗಳ ಮೇಲೆ ಚಾಸಾ-7 ರವರ ಚಿತಾವಣೆಯ ಮೇರೆಗೆ ಸಹಿ ಮಾಡಿ, ಈಗ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಆರೋಪಿಗಳ ವಿರುದ್ಧ ಇರುವ ದ್ವೇಷದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಃಃಮರುವಿಚಾರಣೆ ಇಲ್ಲಃಃ**

(ದಿನಾಂಕಃ11-09-2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-
ಪ್ರ.ದ.ನ್ಯಾ.ದಂಃ ಶೃಂಗೇರಿ